OS No. 8/2018 PW-3

<u>ದಿನಾಂಕ **03.06.2024** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ ಜಿ ವಕೀಲರಿಂದಃ</u>

ನಮ್ಮೂರಿನಿಂದ ಪಟ್ಟಣಕ್ಕೆ 4 ಕಿ. ಮೀ ಆಗುತ್ತದೆ. ಪಟ್ಟಣದಿಂದ ಶೆಟ್ಟಿಹಳ್ಳಿಗೆ 8 ಕಿ.ಮೀ ಅಂತರ ಇದೆ. ನಾವು ರೈತನಾಗಿದ್ದೇನೆ. ಚನ್ನಪಟ್ಟಣದಿಂದ 7. ಕಿ. ಮೀ ಒಳಗೆ 1 ಎಕರೆಗೆ ಅಂದಾಜು ಬೆಲೆ 40 ಲಕ್ಷ ಇದೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ವಾದಿ ರೈತರು.

2. ಜಮೀನಿನ ವಿಷಯಕ್ಕೆ ಕರಾರಿನ ಪತ್ರಕ್ಕೆ ಸಹಿ ಮಾಡಿರುತ್ತೇನೆ. ದಾವಾ ಆಸ್ತಿಯನುನ ನೊಡೀರುತ್ತೇನೆ. ಅದರ ಸರ್ವೇ ನಂಬರ್ ಮತ್ತು ಚೆಕ್ಕು ಬಂದಿಯನ್ನು ಹೇಳಲು ಆಗುವುದಿಲ್ಲ. ಕರಾರು ಸಮಯದಲ್ಲಿ ನನ್ನ ಸಮಕ್ಷಮ ಚೆಕ್ ಅನ್ನು ವಾದಿ ಪ್ರತಿವಾದಿಗೆ ಕೊಟ್ಟಿರುತ್ತಾರೆ. ನನ್ನನ್ನು ಆ ದಿನ ವಾದಿ ಕರೆದುಕೊಂಡು ಬಂದಿರುತ್ತಾರೆ. ಕರಾರು ದಿನ ಬಿಟ್ಟು ನಂತರ ಪ್ರತಿವಾದಿಯನ್ನು ಭೇಟಿಯಾಗಿಲ್ಲ. ನಾನೇ ಹೇಳಿ ಸಾಕ್ಷಿ ಪ್ರಮಾಣ ಪತ್ರವನ್ನು ತಯಾರು ಮಾಡಿಸಿರುತ್ತೇನೆ ಸಾಕ್ಷಿಯು ಪ್ರಮಾಣ ಪತ್ರದಲ್ಲಿ ತಿಳಿಸಿರುವ ದಾಖಲೆಗಳನ್ನು ನೋಡಿಲ್ಲ.

3. ಕರಾರು ಪತ್ರವನ್ನು ಪ್ರತಿವಾದಿಯವರು ತಂದಿರುತ್ತಾರೆ. ಸ್ಟಾಂಪ್ ಪೇಪರ್ 3000 ರೂಪಾಯಿಯ ಮುಖ ಬೆಲೆಯಾಗಿರುತ್ತದೆ. ಅದನ್ನು ಪ್ರತಿವಾದಿಯವರು ತಂದಿರುತ್ತಾರೆ. ಸ್ಟಾಂಪ್ ಪೇಪರ್ ಹಣ ಪಾವತಿ ಮಾಡುವಾಗ ನಾನು ಕಛೇರಿ ಆಚೆ ಇದ್ದೆ. ಕರಾರು ನೊಂದಣಿಯಾಗಿ 7 ವರ್ಷವಾಗಿರುತ್ತದೆ. ಸ್ಟಾಂಪ್ ಪೇಪರ್ ಅನ್ನು ವಾದಿಯೇ ತಂದಿರುತ್ತಾರೆಂದರೆ ಸುಳ್ಳು. ಸಾಕ್ಷಿ ಪ್ರಮಾಣ ಪತ್ರದಲ್ಲಿರುವ ವಿಷಯ ನನಗೆ ಗೊತ್ತಿಲ್ಲ ಎಂದರೆ ಸುಳ್ಳು. ನಿಪಿ-4 ಕರಾರು ಪತ್ರಕ್ಕೆ ಪತ್ರ ಬರಹಗಾರರ ಮುಂದೆ ಸಹಿ ಮಾಡಿರುತ್ತೇನೆ. ಉಪನೋಂಣಾಧಿಕಾರಿಯವರ ಕಛೇರಿಯಲ್ಲಿ ಮಾಡಿರುವುದಿಲ್ಲ. ಪತ್ರ ಬರಹಗಾರವರ ಕಛೇರಿ ಮಂಗಳವಾರಪೇಟೆಯಲ್ಲಿದೆ ಎಂದರೆ ಗೊತ್ತಿಲ್ಲ. ಮಂಗಳವಾರಪೇಟೆಯಿಂದ ಉಪನೋಂಣಾಧಿಕಾರಿಯವರ ಕಛೇರಿಗೆ

1 ಕಿ.ಮೀ ಅಂತವಾಗುತ್ತದೆ. ಬೆಲೆಯುಳ್ಳ ದಾವಾ ಆಸ್ತಿಯನ್ನು ಕಬಳಿಸಲು ವಾದಿಯ ಜೊತೆ ಶಾಮೀಲಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸುಳ್ಳು.

<u>ಮರುವಿಚಾರಣೆಃ ಇಲ್ಲ .</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.